**ದಿನಾಂಕಃ05.11.2022 ರಂದು ಸಾಕ್ಷಿಯನ್ನು ಮದ್ಯಂತರ ಅರ್ಜಿಯ ಆದೇಶದ ಮೇಲೆ ಕರೆಯಿಸಿ ಪ್ರಮಾಣ ಮಾಡಲಾಯಿತು.**

**ಪಾಟೀಸವಾಲುಃ ಶ್ರೀ.ಜನಾರ್ಧನ್ ರೆಡ್ಡಿ ವಕೀಲರಿಂದ ಎರಡನೇ ಎದುರುದಾರರ ಪರವಾಗಿ.**

ನನ್ನ ಗಂಡನಿಗೆ ಒಬ್ಬ ಸಹೋದರಿ ಮಾತ್ರ ಇದ್ದರು. ಅವರು ಈಗ ಬೇರೆ ವಾಸವಾಗಿದ್ದಾರೆ. ನಾನು ಒಂದನೇ ಪಿ.ಯು.ಸಿವರೆಗೂ ಓದಿದ್ದೇನೆ. ನಾನು ಗೃಹಿಣಿ. ನಾವು ಬೆಂಗಳೂರಿಗೆ ಬಂದು ಸುಮಾರು 20 ವರ್ಷ ಆಗಿರುತ್ತದೆ. ನಿಪಿಃ13 ರ ಪ್ರಕಾರ ನನ್ನ ಗಂಡ ಮದ್ಯಪಾನ ಮಾಡಿ ವಾಹನವನ್ನು ಚಲಾಯಿಸುತ್ತಿದ್ದರು ಎಂದು ನಮೂದಿಸಲಾಗಿದೆ ಎಂದರೆ ಸರಿಯಲ್ಲ. ಮದ್ಯಪಾನ ಮಾಡಿದ್ದಾರೋ ಇಲ್ಲವೋ ಎಂದು ಪರೀಕ್ಷಿಸಲು ರಕ್ತ ತೆಗೆದುಕೊಂಡಿದ್ದಾರೆ ಎಂದು ನಮೂದಿಸಲಾಗಿದೆ.

2. ನಾನು ಅಪಘಾತವಾದ ರಸ್ತೆಯನ್ನು ನೋಡಿರುವುದಿಲ್ಲ. ಸದರಿ ರಸ್ತೆ ಹೆಚ್ಚು ಸಂಚಾರ ದಟ್ಟನೆ ಹೊಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅಪಘಾತದ ಸಮಯದಲ್ಲಿ ನನ್ನ ಗಂಡ ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿಯಲ್ಲ. ಪೋಲೀಸ್ ದಾಖಲೆಗಳಲ್ಲಿ ನನ್ನ ಗಂಡ ಹೆಲ್ಮೆಟ್ ಧರಿಸಿದ್ದರು ಎಂದು ನಮೂದಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅಪಘಾತವು ನನ್ನ ಗಂಡನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಎದುರುದಾರ ವಾಹನದ ತಪ್ಪು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೋಲೀಸರ ಜೊತೆ ಶಾಮೀಲಾಗಿ, ಎದುರುದಾರರ ವಾಹನದ ವಿರುದ್ದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಐ.ಎಂ.ವಿ ವರದಿಯ ಪ್ರಕಾರ, ಎದುರುದಾರರ ವಾಹನದ ಮುಂಭಾಗದ ಎಡಭಾಗ ಹಾಗೂ ನನ್ನ ಗಂಡನ ವಾಹನದ ಹಿಂಭಾಗ ಹಾನಿಯಾಗಿರುವ ಕಾರಣ, ನನ್ನ ಗಂಡ ಎದುರುದಾರರ ವಾಹನವನ್ನು ಓವರ್ ಟೇಕ್ ಮಾಡಲು ಹೋಗಿ ಅಪಘಾತ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ.

3. ನನ್ನ ಗಂಡ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದು ದಾಖಲೆಗಳನ್ನು ಪರಿಹಾರ ಪಡೆಯುವ ಉದ್ದೇಶದಿಂದ ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನ ವೇತನ ಆಕ್ಸಿಸ್ ಬ್ಯಾಂಕಿಗೆ ವರ್ಗಾವಣೆ ಆಗುತ್ತಿತ್ತು. ಅದನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ನನ್ನ ಬಳಿ ನಾನು ಆನ್‌ಲೈನ್‌ನಲ್ಲಿ ತೆಗೆದ ದಾಖಲೆ ಇದ್ದು, ಅದನ್ನು ಹಾಜರುಪಡಿಸಬಹುದು. ನನ್ನ ಅತ್ತೆ ಮತ್ತು ಮಾವ ಯಾವಾಗಲೂ ನಮ್ಮ ಜೊತೆ ಇರಲಿಲ್ಲ ಎಂದರೆ ಸರಿಯಲ್ಲ.

**<u>ದಿನಾಂಕಃ05.11.2022 ರಂದು ಸಾಕ್ಷಿಯನ್ನು ಮದ್ಯಂತರ ಅರ್ಜಿಯ ಆದೇಶದ ಮೇಲೆ ಕರೆಯಿಸಿ ಪ್ರಮಾಣ ಮಾಡಲಾಯಿತು.</u>**

**<u>ಮುಂದುವರೆದ ಮುಖ್ಯವಿಚಾರಣೆಃ ಶ್ರೀ.ಎಮ್.ಸುಬ್ರಮಣಿ ವಕೀಲರಿಂದ ಅರ್ಜಿದಾರರ ಪರವಾಗಿ.</u>**

ಸ್ಟೇಟ್‌ಮೆಂಟ್ ಆಫ್ ಅಕೌಂಟ್ ನಿಪಿಃ30 ಎಂದು, ಅದಕ್ಕೆ ಸಂಬಂಧಿಸಿದ ಭಾ.ಸಾ.ಅ ಕಲಂ 65(ಬಿ) ಕೆಳಗಿನ ಪ್ರಮಾಣ ಪತ್ರ ನಿಪಿಃ31 ಎಂದು ಗುರುತಿಸಲಾಯಿತು.

**<u>ಪಾಟೀಸವಾಲುಃ ಶ್ರೀ.ಜನಾರ್ಧನ್ ರೆಡ್ಡಿ ವಕೀಲರಿಂದ ಎರಡನೇ ಎದುರುದಾರರ ಪರವಾಗಿ.</u>**

ನಿಪಿಃ30 ನ್ನು ನಾನು ಈ ಪ್ರಕರಣಕ್ಕಾಗಿ ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ.</u>**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿ, ಓದಿ ಹೇಳಿ ನಂತರ ಸಹಿ ಪಡೆಯಲಾಯಿತು).

ಓ ಹೇ ಕೇ ಸ ಇದೆ.

5 ನೇ ಅಪರ ನ್ಯಾಯಾಧೀಶರು,

ಲಘು ವ್ಯವಹಾರಗಳ ನ್ಯಾಯಾಲಯ,
24 ನೇ ಎಸಿಎಂಎಂ ಮತ್ತು ಸದಸ್ಯರು ಎಂಎಸಿಟಿ.